KARNATAKA LEGISLATIVE ASSEMBLY
PAPER CLIPPING
DEPARTMENT
SUBJECT
NAME OF THE NEWS PAPER

ನ್ಯಾಯಾಂಗದ ಮೇಲೆ ನಿಗಾ ಬೇಡ ಎಂಬ ಎಚ್ಚರಿಕೆ | ಸುಪ್ರೀಂ ಸಲ್ಲಿಸಿದ್ದ ಅರ್ಜಿಗೆ ಸಾಂವಿಧಾನಿಕ ಪೀಠದ ತೀರ್ಪು

# ಮಾಹಿತಿ ಹಕ್ಕು ಕಾಯ್ದೆ ವ್ಯಾಪ್ತಿಗೆ ಸಿಜೆಐ ಕಚೇರಿ

14/11/19

**ನವದೆಹಲಿ:** ದೇಶದ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ಕಚೇರಿ ಸಾರ್ವಜನಿಕ ಸಂಸ್ಥೆಯಾಗಿದ್ದು, ಇದೂ ಮಾಹಿತಿ ಹಕ್ಕು ಕಾಯ್ದೆ ವ್ಯಾಪ್ತಿಗೆ ಬರುತ್ತದೆ ಎಂದು ಬುಧವಾರ ಸುಪ್ರೀಂಕೋರ್ಟ್ ಮಹತ್ವದ ತೀರ್ಪು ನೀಡಿದೆ.

ಮುಖ್ಯ ನ್ಯಾಯಮೂರ್ತಿ ರಂಜನ್ ಗೊಗೋಯ್ ನೇತೃತ್ವದ ಸಾಂವಿಧಾನಿಕ ಪೀಠ ಐತಿಹಾಸಿಕ ತೀರ್ಪು ನೀಡಿದ್ದು, ಮಾಹಿತಿ ಹಕ್ಕಿನ ಮೂಲಕ ನ್ಯಾಯಾಂಗದಲ್ಲಿ ಏನೇನು ಆಗುತ್ತದೆ ಎನ್ನುವುದರ ಮೇಲೆ ನಿಗಾ ವಹಿಸುವ ಅಸ್ತ್ರವಾಗಕೂಡದು ಎಂಬ ಎಚ್ಚರಿಕೆಯನ್ನೂ ನೀಡಿದೆ. ಸ್ವತಃ ಸುಪ್ರೀಂಕೋರ್ಟೇ ಅರ್ಜಿದಾರವಾಗಿರುವ ಪ್ರಕರಣದಲ್ಲೇ ಸುಪ್ರೀಂಕೋರ್ಟ್ ತನ್ನ ಪ್ರತಿಪಾದನೆಯ ವಿರುದ್ಧವೇ ತೀರ್ಪು ನೀಡಿದ್ದು ಅಪರೂಪದ್ದು ಎಂದು ದಾಖಲಾಗಿದೆ.

ಸಿಜೆಐ ಕಚೇರಿಯೂ ಆರ್‌ಟಿಐ ವ್ಯಾಪ್ತಿಗೆ ಬರಲಿದೆ ಎಂದು 2[illegible]ರಲ್ಲಿ ದೆಹಲಿ ಹೈಕೋರ್ಟ್ ನೀಡಿದ್ದ ತೀರ್ಪನ್ನು [illegible] ಸ್ವತಃ 'ಸುಪ್ರೀಂಕೋರ್ಟ್' ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಸಾಂವಿಧಾನಿಕ ಪೀಠ, 'ಸಾಂವಿಧಾನಿಕ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ನ್ಯಾಯಮೂರ್ತಿಗಳು ಕಾನೂನಿಗಿಂತ ಹೆಚ್ಚು ಎಂದು ಭಾವಿಸಲು ಸಾಧ್ಯವಿಲ್ಲ' ಎಂದಿದೆ. ನ್ಯಾ.ಎನ್.ವಿ.ರಮಣ, ನ್ಯಾ.ಡಿ.ವೈ.ಚಂದ್ರಚೂಡ್, ನ್ಯಾ.ದೀಪಕ್ ಗುಪ್ತಾ, ನ್ಯಾ. ಸಂಜೀವ ಖನ್ನಾ ಅವರೂ ಇದ್ದ ನ್ಯಾಯಪೀಠದಲ್ಲಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವ ಜತೆಜತೆಯಾಗಿಯೇ ಹೋಗಬೇಕು ಎಂದು ಸಿಜೆಐ ರಂಜನ್ ಗೊಗೋಯ್ ಪ್ರತಿಪಾದಿಸಿದ್ದಾರೆ.

> ಮಾಹಿತಿ ಹಕ್ಕು ಮತ್ತು ಪಾರದರ್ಶಕತೆಗಾಗಿನ ಹಕ್ಕು, ಈ ಎರಡೂ ವಿಚಾರಗಳೂ ಸಮಾನಾಂತರವಾಗಿ ಸಾಗಬೇಕು. ಇದರ ಜತೆಗೆ ನ್ಯಾಯಾಂಗದ ಸ್ವಾತಂತ್ರ್ಯವೂ ರಕ್ಷಣೆಯಾಗಬೇಕು.
> ● ನ್ಯಾ.ಎನ್.ವಿ.ರಮಣ



> ನ್ಯಾಯಾಂಗದಲ್ಲಿ ಪಾರದರ್ಶಕತೆ ಮತ್ತು ಸ್ವಾತಂತ್ರ್ಯ ಎರಡೂ ಜತೆ ಜತೆಗೇ ಸಾಗಬೇಕು
> ● ನ್ಯಾ.ಸಂಜೀವ ಖನ್ನಾ

'ಮಾಹಿತಿ ಹಕ್ಕು ಮತ್ತು ಖಾಸಗಿತನದ ಹಕ್ಕು ಎನ್ನುವುದು ಒಂದೇ ನಾಣ್ಯದ ಎರಡು ಮುಖಗಳು. ಯಾವುದೇ ಒಂದು ಅಂಶ ಒಂದರ ವಿರುದ್ಧ ಒಂದು ಮೇಲುಗೈ ಸಾಧಿಸುವಂತೆ ಇಲ್ಲ. ಆದರೆ ಮುಖ್ಯ ನ್ಯಾಯಮೂರ್ತಿಗಳ ಕಚೇರಿಯಿಂದ ಮಾಹಿತಿ ನೀಡುವ ಸಂದರ್ಭದಲ್ಲಿ ಪಾರದರ್ಶಕತೆ ಕಾಪಾಡಿಕೊಳ್ಳಬೇಕು ಮತ್ತು ಯಾವ ಮಾಹಿತಿಯನ್ನು ನೀಡಬೇಕು ಎಂಬುದರ ಬಗ್ಗೆ ಜಾಗರೂಕತೆಯಿಂದ ನಿರ್ಧರಿಸಬೇಕು' ಎಂದು ನ್ಯಾಯಪೀಠ ಪ್ರತಿಪಾದಿಸಿದೆ.

**ನಿಗಾ ವಹಿಸುವಿಕೆ ಆಗಬಾರದು:** ಮಾಹಿತಿ ಹಕ್ಕು ಕಾಯ್ದೆ ವ್ಯಾಪ್ತಿಗೆ ಮುಖ್ಯ ನ್ಯಾಯಮೂರ್ತಿಗಳ ಕಚೇರಿ ಬರುವುದು ಸರಿ ಎಂದು ಹೇಳಿದ ಸಿಜೆಐ ರಂಜನ್ ಗೊಗೋಯ್, 'ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ನ್ಯಾಯಮೂರ್ತಿ ಕಾನೂನಿಗಿಂತ ಹೆಚ್ಚು ಎಂಬ ಭಾವನೆ ಸಲ್ಲದು' ಎಂದರು. ಆದರೆ ನ್ಯಾಯಾಂಗ ಕ್ಷೇತ್ರದಲ್ಲಿ ಸೂಕ್ಷ್ಮ ಮಾಹಿತಿಯಾಗಿರುವ ನ್ಯಾಯಮೂರ್ತಿಗಳ ನೇಮಕ ಸೇರಿದಂತೆ ತತ್ಸಂಬಂಧಿ ವಿಚಾರಗಳ ಬಗ್ಗೆ ಮಾಹಿತಿ ಹಕ್ಕಿನಲ್ಲಿ ಕೇಳುವಂತಿಲ್ಲ ಎಂದು ಹೇಳಿದ್ದಾರೆ ಮುಖ್ಯ ನ್ಯಾಯಮೂರ್ತಿ.

**ಪ್ರಕರಣವನ್ನು ಅನುಸರಿಸಿ:** ನ್ಯಾಯಾಂಗದಲ್ಲಿ ನಡೆಯುವ ನೇಮಕ (ಹೈಕೋರ್ಟ್, ಸುಪ್ರೀಂಕೋರ್ಟ್‌ಗಳಿಗೆ ನ್ಯಾಯಮೂರ್ತಿ, ಮುಖ್ಯ ನ್ಯಾಯಮೂರ್ತಿಗಳ ನೇಮಕ) ಪ್ರಕ್ರಿಯೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳ ಸಮಿತಿ (ಕೊಲೀಜಿಯಂ)ಯ ನಡಾವಳಿಗಳನ್ನು ಮಾಹಿತಿ ಹಕ್ಕು ಕಾಯ್ದೆ ವ್ಯಾಪ್ತಿಗೆ ತರಬೇಕೇ ಎಂಬ ವಿಚಾರ ಪ್ರಸ್ತಾಪಿಸಿ, ಅದನ್ನು 'ಪ್ರಕರಣದ ಆಧಾರದ ಮೇಲೆ ನಿರ್ಧಾರ ಕೈಗೊಳ್ಳಬಹುದಾಗಿದೆ' ಎಂದು ನ್ಯಾಯ ಪೀಠ ಹೇಳಿತು. ಅದೂ ಕೂಡ ಸಾರ್ವಜನಿಕರ ಹಿತ ಗಮನಿಸಿ ಎಂದು ಸ್ಪಷ್ಟಪಡಿಸಿದೆ. ಕೊಲೀಜಿಯಂ ಶಿಫಾರಸು ಮಾಡಿದ ನ್ಯಾಯಮೂರ್ತಿಗಳ ಹೆಸರನ್ನು ಪ್ರಕಟಪಡಿಸುವುದಕ್ಕೆ ಅಡ್ಡಿ ಇಲ್ಲ ಎಂದಿತು.

▶ 10ನೇ ಪುಟಕ್ಕೆ

# ಮಾಹಿತಿ ಹಕ್ಕು ಕಾಯ್ದೆ ವ್ಯಾಪ್ತಿಗೆ ಸಿಜೆಐ ಕಚೇರಿ

14/11/19

**1ನೇ ಪುಟದಿಂದ ▸ ಪ್ರತ್ಯೇಕ ತೀರ್ಪುಗಳು:** ನ್ಯಾಯಪೀಠದಲ್ಲಿದ್ದ ನ್ಯಾ.ಡಿ.ವೈ.ಚಂದ್ರಚೂಡ್, ನ್ಯಾ.ಸಂಜೀವ ಖನ್ನಾ, ನ್ಯಾ.ಎನ್.ವಿ.ರಮಣ ಅವರು ಪ್ರತ್ಯೇಕವಾಗಿ ತೀರ್ಪುಗಳನ್ನು ಬರೆದಿದ್ದಾರೆ. ಒಟ್ಟು 88 ಪುಟಗಳ ಈ ತೀರ್ಪು ದೇಶದ ಸುಪ್ರೀಂಕೋರ್ಟ್ ಇತಿಹಾಸದಲ್ಲಿ ಒಂದು ಮೈಲುಗಲ್ಲಾಗಲಿದೆ. ಹಿಂದೆ ಸಿಜೆಐ ಆಗಿದ್ದ ಕೆ.ಜಿ.ಬಾಲಕೃಷ್ಣನ್ ಆರ್‌ಟಿಐ ಅಡಿ ನ್ಯಾಯಮೂರ್ತಿಗಳ ಬಗೆಗಿನ ಮಾಹಿತಿ ನೀಡಲು ಸಮ್ಮತಿ ನೀಡಿರಲಿಲ್ಲ.

**ಅಗರ್ವಾಲ್ ಹೋರಾಟ:** ಮಾಹಿತಿ ಹಕ್ಕು ಹೋರಾಟಗಾರ ಎಸ್.ಸಿ. ಅಗರ್ವಾಲ್ ಮತ್ತು ಅವರ ಪರ ವಾದಿಸಿದ್ದ ನ್ಯಾಯವಾದಿ ಪ್ರಶಾಂತ್ ಭೂಷಣ್ ಈ ಬೆಳವಣಿಗೆಯ ಕಾರಣಕರ್ತರಾಗಿದ್ದಾರೆ. 2010ರಲ್ಲಿ ದೆಹಲಿ ಹೈಕೋರ್ಟ್ ಮುಖ್ಯ ನ್ಯಾ.ಎ.ಪಿ.ಶಾ, ನ್ಯಾಯಮೂರ್ತಿಗಳಾದ ವಿಕ್ರಮ್ ಜಿತ್ ಸೇನ್ ಮತ್ತು ಎಸ್. ಮುರಳೀಧರ್ ಅವರು 'ಸುಪ್ರೀಂಕೋರ್ಟ್ ಅನ್ನು ಆರ್‌ಟಿಐ ವ್ಯಾಪ್ತಿಯಲ್ಲಿ ತಂದರೆ ನ್ಯಾಯಾಂಗ ಪ್ರಕ್ರಿಯೆಗಳಿಗೆ ಅಡ್ಡಿಯಾಗುತ್ತದೆ' ಎಂಬ ಸುಪ್ರೀಂಕೋರ್ಟ್‌ನ ವಾದವನ್ನು ತಿರಸ್ಕರಿಸಿ, ಅದೂ ಕಾಯ್ದೆಯಲ್ಲಿ ಒಳಗೊಳ್ಳಬೇಕು ಎಂದು ತೀರ್ಪು ನೀಡಿತ್ತು.

**ಪಿಎಂಒ ಮತ್ತು ಮಾಹಿತಿ ಹಕ್ಕು ಕಾಯ್ದೆ:** ಮಾಹಿತಿ ಹಕ್ಕು ಕಾಯ್ದೆ ವ್ಯಾಪ್ತಿಯಲ್ಲಿ ಪ್ರಧಾನಮಂತ್ರಿಗಳ ಕಚೇರಿ (ಪಿಎಂಒ) ಬರುತ್ತದೆ. ಇದರ ಅರ್ಥ ಅದು ಕಾರ್ಯನಿರ್ವಹಿಸುವ ಎಲ್ಲಾ ಆಗುಹೋಗುಗಳ ಬಗ್ಗೆ ಕಾಯ್ದೆ ವ್ಯಾಪ್ತಿಯಲ್ಲಿ ಮಾಹಿತಿ ಕೋರಿ ಅರ್ಜಿ ಸಲ್ಲಿಸಿದರೆ ಮಾಹಿತಿ ಸಿಗುವುದಿಲ್ಲ. ದೇಶದ ರಕ್ಷಣೆ, ದ್ವಿಪಕ್ಷೀಯ ಬಾಂಧವ್ಯ ಮತ್ತು ಇತರ ಸೂಕ್ಷ್ಮ ಎಂದು ಪಟ್ಟಿ ಮಾಡಲಾಗಿರುವ ವಿಚಾರಗಳ ಬಗ್ಗೆ ಅದು ಮಾಹಿತಿ ನೀಡುವುದಿಲ್ಲ.

## ಟೈಮ್‌ಲೈನ್

2009: ಸುಪ್ರೀಂಕೋರ್ಟ್ ಕೂಡ ಆರ್‌ಟಿಐ ವ್ಯಾಪ್ತಿಗೆ– ಕೇಂದ್ರ ಮಾಹಿತಿ ಹಕ್ಕು ಆಯೋಗದ ಆದೇಶ

2010ರ ಜನವರಿ: ಸಿಐಸಿ ಆದೇಶ ಪ್ರಶ್ನಿಸಿ ದೆಹಲಿ ಹೈಕೋರ್ಟ್ ಮೊರೆಹೋದ ಸುಪ್ರೀಂಕೋರ್ಟ್

2010ರ ಸೆಪ್ಟೆಂಬರ್: ಸುಪ್ರೀಂ ಅರ್ಜಿ ತಳ್ಳಿಹಾಕಿದ ಏಕ ಸದಸ್ಯ ಪೀಠ, ಸಿಜೆಐ ಕಚೇರಿಯೂ ಆರ್‌ಟಿಐ ವ್ಯಾಪ್ತಿಗೆ ಬರುತ್ತೆ ಎಂಬ ತೀರ್ಪು

2010ರ ನವೆಂಬರ್: ದೆಹಲಿ ಹೈಕೋರ್ಟ್‌ನ ಏಕ ಸದಸ್ಯ ಪೀಠದ ತೀರ್ಪು ಪ್ರಶ್ನಿಸಿದ ಸುಪ್ರೀಂಕೋರ್ಟ್. ತ್ರಿಸದಸ್ಯರ ವಿಶೇಷ ಪೀಠ ರಚನೆ. ಈ ಪೀಠದಿಂದಲೂ ಸುಪ್ರೀಂ ವಿರುದ್ಧವಾಗಿಯೇ ತೀರ್ಪು

2010: ಸುಪ್ರೀಂಕೋರ್ಟ್‌ಗೇ ಮೇಲ್ಮನವಿ ಸಲ್ಲಿಸಿದ 'ಸುಪ್ರೀಂಕೋರ್ಟ್'.

2016: ನ್ಯಾ. ರಂಜನ್ ಗೊಗೋಯ್ ನೇತೃತ್ವದ ಪೀಠದಿಂದ ವಿಚಾರಣೆ. ಸಾಂವಿಧಾನಿಕ ಪೀಠಕ್ಕೆ ಪ್ರಕರಣ ವರ್ಗಾವಣೆ

2019ರ ನವೆಂಬರ್: ಮುಖ್ಯ ನ್ಯಾ. ರಂಜನ್ ಗೊಗೋಯ್ ನೇತೃತ್ವದ ಪೀಠದಿಂದಲೇ ಸಿಜೆಐ ಕಚೇರಿಯೂ ಆರ್‌ಟಿಐ ವ್ಯಾಪ್ತಿಗೆ ಎಂಬ ತೀರ್ಪು.